ಶ್ರೀ ಟಿ.ವಿ. ಜಯಚಂದ್ರ :— ಮಾನ್ಯ ಅಧ್ಯಕ್ಷರೆ, ಸಂತೆಮಾರನಹಳ್ಳಿ, ಕೊಳ್ಳೆಗಾಲ, ಮಲೆಮಹದೇಶ್ವರ ಬೆಟ್ಟ, ಯಳಂದೂರು, ಬಿಳಿಗಿರಿರಂಗನಬೆಟ್ಟದಲ್ಲಿ ಕೂಡ ಹಾಪ್‌ಕಾಮ್ಸ್ ಮಳಿಗೆಗಳನ್ನು ತೆರೆಯಬೇಕೆನ್ನುವ ಉದ್ದೇಶ ಇದೆ. ಆದರೆ ಪ್ರಾಥಮಿಕ ಹಂತವಾಗಿ ನಾನು ಆಗಲೇ ಹೇಳಿದಂತೆ ಚಾಮರಾಜನಗರದ 4 ಸೆಂಟರ್‌ಗಳಲ್ಲಿ ತೆರೆಯುತ್ತೇವೆ ತದನಂತರ ಮಾನ್ಯ ಸದಸ್ಯರು ಹೇಳಿದ ಕಡೆಗಳಲ್ಲಿ ತೆರೆಯುವುದಕ್ಕೆ ಪ್ರಯತ್ನಿಸುತ್ತೇವೆ. ಚಾಮರಾಜನಗರದಲ್ಲಿ ತೋಟಗಾರಿಕೆ ಸಂಘ ಹೆಚ್ಚು ಚುರುಕಾಗಿ ಕೆಲಸ ಮಾಡಿದರೆ ಅಲ್ಲಿ ತೋಟದ ಬೆಳೆಗಾರರಿಗೆ ಸಾಕಷ್ಟು ಸಹಾಯವಾಗುತ್ತದೆ. ಮಾನ್ಯ ಸದಸ್ಯರಿಗೆ ತಿಳಿದಿರುವ ಹಾಗೆ ಬಹುಶಃ ತಮ್ಮ ಜಿಲ್ಲೆಯಲ್ಲಿ ಬೆಳೆಯುವಂಥ ಬೆಳೆಗಳೆಲ್ಲವನ್ನು ಕೊಯಮತ್ತೂರಿನ ಭಾಗಕ್ಕೆ, ಅಚ್ಚಪಕ್ಕದ ತಮಿಳುನಾಡಿಗೆ ಹೋಗುತ್ತಿಂಥ ವಾತಾವರಣ ಅವಕಾಶ ಇದೆ. ನಿಮ್ಮ ಜಿಲ್ಲೆಯಲ್ಲಿ ಸಂಘವನ್ನು ಹೆಚ್ಚು ಚುರುಚುಗೊಳಿಸುವಂಥ ಕೆಲಸವನ್ನು ಮಾಡಿ. ತಾವು ಹೇಳಿದ ಹಾಗೆ ಎಲ್ಲಾ ಕಡೆಯಲ್ಲೂ ಹಾಪ್‌ಕಾಮ್ಸ್ ಸೆಂಟರುಗಳನ್ನು ಪ್ರಾರಂಭ ಮಾಡೋಣ.

ಆಶ್ರಯ ಯೋಜನೆಯಡಿ ಜಿಲ್ಲೆಗಳಿಗೆ ಹಂಚಿರುವ ನಿವೇಶನಗಳ ಕುರಿತು.

491(4529) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಆಶ್ರಯ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಪ್ರತಿ ಜಿಲ್ಲೆಗಳಿಗೆ ಹಂಚಿರುವ ನಿವೇಶನ ಸಂಖ್ಯೆ ಎಷ್ಟು ವಿವರ ನೀಡುವುದು;

ಆ) ಸರ್ಕಾರದಿಂದ ಹಕ್ಕು ಪತ್ರಗಳನ್ನು ಪಡೆದ ಫಲಾನುಭವಿಗಳಿಗೆ ಮನೆ ನಿವೇಶನಗಳು ಈವರೆಗೆ ದೊರೆಯದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳು ಯಾವುವು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :—

ಅ) ಅನುಬಂಧದಲ್ಲಿ ಲಗತ್ತಿಸಿದೆ.

ಆ) ಇಲ್ಲ.

ಇ) ಮೇಲಿನ ಪ್ರಶ್ನೆ (ಅ) ಗೆ ನೀಡಿದ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ANNEXURE TO THE L.A. QUESTION NO. 4529

Sl.No.	District	Total
1	BANGALORE (R)	9951
2	BANGALORE (U)	462
3	CHITRADURGA	8034
4	DAVANGERE	1277
5	KOLAR	4189
6	TUMKUR	7409
7	SHIMOGA	11380
8	MYSORE	11597
9	CHAMARAJNAGAR	3611
10	CHIKMAGALUR	938
11	D. KANNADA	7143
12	UDUPI	936
13	HASSAN	6596
14	KODAGU	920
15	MANDYA	13779
16	BELGAUM	7635
17	BIJAPUR	5381
18	BAGALKOT	1156
19	DHARWAD	763
20	GADAG	3263
21	HAVERI	5291
22	U. KANNADA	1306
23	GULBARGA	4622
24	BIDAR	2825
25	BELLARY	9220
26	RAICHUR	3667
27	KOPPAL	4289
	TOTAL	137640

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ :— ಮಾನ್ಯ ಅಧ್ಯಕ್ಷರೆ, ಆಶ್ರಯ ಯೋಜನೆ ಅಡಿಯಲ್ಲಿ ಧಾರವಾಡ ಜಿಲ್ಲೆಗೆ ಕಳೆದ ಮೂರು ವರ್ಷದಲ್ಲಿ ಎಷ್ಟು ಮನೆಗಳನ್ನು ಕೊಡಲಾಗಿದೆ ಎಂದು ಕೇಳಿದ್ದಕ್ಕೆ 763 ಎಂದು ಒಂದು ಸಂಖ್ಯೆಯನ್ನು ಮಾತ್ರ ಕೊಟ್ಟಿದ್ದಾರೆ. ನನಗೆ ಮೂರು ವರ್ಷದ್ದು ಪ್ರತ್ಯೇಕವಾದ ಮಾಹಿತಿ ಬೇಕಿತ್ತು. ಅದರಲ್ಲೂ ಮುಖ್ಯವಾಗಿ ಹುಬ್ಬಳ್ಳಿ-ಧಾರವಾಡ ಮಹಾನಗರದ ಕಾರ್ಪೊರೇಷನ್ ಏರಿಯಾದಲ್ಲಿ ಮೂರು ವರ್ಷಗಳಿಂದ ಏನೂ ಕೊಟ್ಟಿಲ್ಲ, ಏಕೆ? ಇನ್ನು 2ನೇ ಪ್ರಶ್ನೆಗೆ ಇಲ್ಲ ಎನ್ನುವ ಉತ್ತರ ಕೊಟ್ಟಿದ್ದಾರೆ. ಆದರೆ ಸನ್ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಚುನಾವಣೆಗೆ ಮೊದಲು ಅಧಿಕಾರಿಗಳನ್ನು ಸದುಪಯೋಗ ಮಾಡಿಕೊಂಡು ಧಾರವಾಡ ಹುಬ್ಬಳ್ಳಿಯಲ್ಲಿ ದೊಡ್ಡ ಸಮಾರಂಭವನ್ನು ಮಾಡಿ ಹಕ್ಕುಪತ್ರಗಳನ್ನು ಮಾತ್ರ ಹಂಚಿದ್ದಾರೆ. ಇಲ್ಲಿಯವರೆಗೆ ಅವರಿಗೆ ನಿವೇಶನಗಳನ್ನಾಗಲಿ, ಮನೆಗಳನ್ನಾಗಲಿ ಕೊಟ್ಟಿಲ್ಲ. ಆದ್ದರಿಂದ ಇವರಿಗೆ ಭೂಮಿ ಮೇಲೆ ಎಲ್ಲಿ ಜಾಗ ಕೊಟ್ಟಿದ್ದಾರೆ? ಎನ್ನುವ ಬಗ್ಗೆ ಉತ್ತರ ಕೊಡಬೇಕು. 3ನೇ ಪ್ರಶ್ನೆಗೆ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ದಯಮಾಡಿ ಎಲ್ಲಾ ಪ್ರಶ್ನೆಗಳಿಗೂ ಸರಿಯಾದ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಖಮರುಲ್ ಇಸ್ಲಾಂ :— ಮಾನ್ಯ ಅಧ್ಯಕ್ಷರೆ, ಕಳೆದ ಮೂರು ವರ್ಷಗಳಲ್ಲಿ ಪ್ರತಿ ಜಿಲ್ಲೆಗಳಿಗೆ ಹಂಚಿರುವ ನಿವೇಶನ ಬಗ್ಗೆ ಕೇಳಿದ್ದು, ನಾನು ಆ ಪಟ್ಟಿಯನ್ನು ಕೊಟ್ಟಿದ್ದೇನೆ. ಹೌದು, ಈ ಪಟ್ಟಿ ಪ್ರಕಾರ ಸ್ವಲ್ಪ ಡಿಸ್ಕ್ರಿಮಿನೇಷನ್ ಆಗಿದೆ. ಏಕೆಂದರೆ ಆ ಸಮಯದಲ್ಲಿ Government has taken a decision to give the sites as per the demand. ನಮ್ಮ ಸರ್ಕಾರ ಬಂದ ಮೇಲೆ ಈ ವರ್ಷ ಜನಸಂಖ್ಯಾ ಆಧಾರದ ಮೇಲೆ ಆಶ್ರಯ ಮನೆಗಳನ್ನು ಹಂಚಿದ್ದೇವೆ. ಮತ್ತು ಈ ವರ್ಷಕ್ಕೆ ಎರಡು ಕೋಟಿ ರೂಪಾಯಿಗಳನ್ನು ರೂರಲ್ ಗೆ ಮತ್ತು ಎರಡು ಕೋಟಿ ರೂಪಾಯಿಗಳನ್ನು ಅರ್ಬನ್ ಗೆ Rs. 1.60 crores have been released to the different districts to purchase land and distribute the sites. ತಾವು ಹಾಗೂ ಇನ್ನಿತರ ಸದಸ್ಯರು-ಹಕ್ಕುಪತ್ರ ಕೊಟ್ಟಿದ್ದಾರೆ, ಜಾಗ ಇಲ್ಲ ಎಂದು ಹೇಳಿದರು. ಮೊದಲು ಇದು ನನ್ನ ಗಮನಕ್ಕೆ ಬಂದಿರಲಿಲ್ಲ. ನಮ್ಮ ಕ್ಷೇತ್ರದಲ್ಲಿ, ನಮ್ಮ ಡಿಸ್ಟ್ರಿಕ್ಟ್‌ನಲ್ಲಿ ಇಷ್ಟು ಜನರಲ್ಲಿ ಹಕ್ಕುಪತ್ರ ಇದೆ ಎನ್ನುವುದು ಮಾನ್ಯ ಸದಸ್ಯರು ಸ್ಪೆಸಿಫಿಕ್ ಆಗಿ ನನಗೆ ಹೇಳಬೇಕು. ಸಂಬಂಧಪಟ್ಟವರ ಹತ್ತಿರ ಹಕ್ಕುಪತ್ರ ಇದ್ದರೆ they have to be selected earlier by the Committee ಏಕೆಂದರೆ, they have got the sites ಆಶ್ರಯ ಮನೆ ಕಟ್ಟುವುದಕ್ಕೆ 20 ಸಾವಿರ ರೂಪಾಯಿಗಳನ್ನು ಏನು ಕೊಡುತ್ತೇವೋ ಪ್ರಿಯಾರಿಟಿ ಕೂಡ ಹಕ್ಕುಪತ್ರ ಇದ್ದವರಿಗೇ ಕೊಡಬೇಕು. ತಾವು ಆ ಪಟ್ಟಿ ಕೊಡಬೇಕು. As per your suggestion, I will get the report as to how many are getting Hakkupatras from different Deputy Commissioner and the Chief Executive Officers.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗಿದೆ ಎಂದರೆ ಜನ ಯಾರೂ ಕೂಡ ಸರ್ಕಾರಿ ಜಾಗ ಅಥವಾ ಖಾಸಗೀ ಜಾಗವನ್ನು ಆಕ್ಷೆಯರ್ ಮಾಡಿಕೊಳ್ಳಲಿಲ್ಲ. ಸುಮ್ಮನೆ ಸಾವಿರಾರು ಸಂಖ್ಯೆಯಲ್ಲಿ, ನಿವೇಶನಗಳ ಹಕ್ಕುಪತ್ರಗಳನ್ನು ಕೊಟ್ಟುಬಿಟ್ಟಿದ್ದಾರೆ. ನಂಬರ್ ಹಾಕಿದ್ದಾರೆ. ಬೇಕಾದರೆ ಹುಬ್ಬಳ್ಳಿ - ಧಾರವಾಡಕ್ಕೆ ಬಂದು ಎನ್‌ಕ್ವೆಯರಿ ಮಾಡಬಹುದು. ಬಹುಶಃ ಇದು ಎಲ್ಲಾ ಕಡೆಯೂ ಆಗಿದೆ. ಅಂದರೆ ಬೋಗಸ್ ಹಕ್ಕುಪತ್ರ ಕೊಟ್ಟಿದ್ದಾರೆ. ಜಾಗ ಇಲ್ಲ, ಅಥವಾ ಸೈಟ್ ಇಲ್ಲ. ಇದರ ಬಗ್ಗೆ ಎನ್‌ಕ್ವೆಯರಿ ಮಾಡಬೇಕು. ಹಾಗೆಯೇ ಮಾನ್ಯ ಬೆಲ್ಲದ್ ಅವರು ಪ್ರತೀ ವರ್ಷ ಎಷ್ಟೆಷ್ಟು ಮನೆಗಳನ್ನು ಹಂಚಿದ್ದೀರಿ ಎನ್ನುವ ಪಟ್ಟಿಯನ್ನು ಕೊಡಿ ಎಂದು ಕೇಳಿದರು. ಆದರೆ, ಮಾನ್ಯ ಸಚಿವರು ಉತ್ತರದ ಪ್ರತಿಯಲ್ಲಿ ಮೂರು ವರ್ಷದ್ದು ಒಟ್ಟಿಗೆ ಸೇರಿಸಿ ಸಂಖ್ಯೆಯನ್ನು ಕೊಟ್ಟಿದ್ದಾರೆ.

11.40ಎ.ಎಂ.

ಒಂದೊಂದು ಜಿಲ್ಲೆಗೆ ಒಂದು ಕಡೆ 9 ಸಾವಿರ, ಒಂದು ಕಡೆ 7 ಸಾವಿರ, ಒಂದು ಕಡೆ 800 ಹೀಗೆ ಕೊಟ್ಟು ಡಿಸ್ಕ್ರಿಮಿನೇಷನ್ ಏಕೆ ಮಾಡಲಾಗಿದೆ? ಎನ್ನುವ ಪ್ರಶ್ನೆ ಇದೆ. ನೀವು ಪ್ರತಿಯೊಂದು ಜಿಲ್ಲಾವಾರು ಸೈಟುಗಳನ್ನು ಸರ್ವೆ ಮಾಡಿದ್ದೇವೆಂದು ಹೇಳಿದ್ದೀರಿ. ಒಂದು ಕಡೆ 12 ಸಾವಿರ ಸೈಟುಗಳನ್ನು ಸರ್ವೆ ಮಾಡಿದ್ದೇವೆಂದು ಹೇಳಿದ್ದೀರಿ. ಮೂರು ವರ್ಷಗಳಲ್ಲಿ 700 ಸೈಟುಗಳನ್ನು ಕೊಟ್ಟಿದ್ದೀರಿ. ಪ್ರತಿಯೊಂದು ಜಿಲ್ಲೆಗೆ ಸೈಟುಗಳನ್ನು ಹಂಚಲು ಗೈಡ್‌ಲೈನ್ಸ್ ಏನಿದೆ? ಅಕ್ವಿಜಿಷನ್ ಮಾಡಲು ನೀವು ಎಷ್ಟು ಹಣವನ್ನು ನಿಗದಿಪಡಿಸಿದ್ದೀರಿ? ಅಲ್ಲಿಗೆ ಆ ಹಣ ಸಾಲುತ್ತದೆಯೋ, ಇಲ್ಲವೋ? ಅದಕ್ಕೆ ಸಚಿವರು ಉತ್ತರಿಸಬೇಕು.

ಶ್ರೀ ಖಮರುಲ್ ಇಸ್ಲಾಂ :— ಅವರು ಯಾವ ರೀತಿ ಪ್ರಶ್ನೆ ಕೇಳಿದ್ದಾರೆ, ಆ ಪ್ರಕಾರ ನಾನು ಪಟ್ಟಿ ಕೊಟ್ಟಿದ್ದೇನೆ ತಾವು ಮತ್ತೊಂದು ಪ್ರಶ್ನೆ ಕೇಳಿದರೆ, ಯಾವ್ಯಾವ ವರ್ಷಗಳಲ್ಲಿ ಎಷ್ಟೆಷ್ಟು ಸೈಟು ಹಂಚಿಕೆಯಾಗಿದೆ ಎಂಬ ಬಗ್ಗೆ ಉತ್ತರ ಕೊಡುತ್ತೇನೆ. I will write the letter to the Deputy Commissioners to get how many Hakkupathra people are available, all those who are having Hakkupathra and I will ascertain the genuiness of Hakkupathra. ಇದು ಬಹಳ ಒಳ್ಳೆಯ ಸಲಹೆಯಾಗಿದ್ದು, ಅದನ್ನು ನಾನು ಒಪ್ಪುತ್ತೇನೆ.

ಶ್ರೀ ಹೆಚ್.ಸಿ. ಬಸವರಾಜು :— ಸಚಿವರು ಈ ಸದನವನ್ನು ತಪ್ಪುದಾರಿಗೆ ಎಳೆಯುತ್ತಿರುವುದು ಕಂಡು ಬಂದಿದೆ. ಮಾನ್ಯ ಸದಸ್ಯರು ಕೇಳಿರುವ ಮೊದಲನೆ ಪ್ರಶ್ನೆಗೆ, ಸಚಿವರು ಒಟ್ಟಾರೆ ಹಂಚಿರುವ ಸೈಟುಗಳ ಬಗ್ಗೆ ಉತ್ತರ ನೀಡಿದ್ದಾರೆ. ಅದು ಸರಿಯಲ್ಲ. ಮೂರು ವರ್ಷಗಳಲ್ಲಿ ಪ್ರತಿ ವರ್ಷ ಪ್ರತಿ ಜಿಲ್ಲೆಗೆ ಎಷ್ಟು ಮನೆಗಳನ್ನು ಹಂಚಿದ್ದೀರಿ

ಎಂಬುದಕ್ಕೆ ಉತ್ತರವನ್ನು ಕೊಡಬೇಕು. ಎರಡನೆಯದಾಗಿ, ಈಗಾಗಲೇ ಪ್ರಸ್ತಾಪಿಸಿದ ಹಾಗೆ, ಆಶ್ರಯ ಯೋಜನೆಯಡಿಯಲ್ಲಿ 20 ಸಾವಿರ ರೂಪಾಯಿಗಳಲ್ಲಿ ಮನೆ ಕಟ್ಟಬೇಕೆಂದು ಹೇಳಿದ್ದು, ಪರೋಕ್ಷವಾಗಿ ನಾವು ಫಲಾನುಭವಿಗಳನ್ನು ಕರಪ್ಷನ್‌ಗೆ ತರುತ್ತಿದ್ದೇವೆ. ಅವರು 20 ಸಾವಿರ ರೂಪಾಯಿಗಳಲ್ಲಿ ಮನೆ ಕಟ್ಟಲಾಗುವುದಿಲ್ಲ. ಯಾವುದೋ ಮನೆ ತೋರಿಸಿ, ಮನೆ ಹಂಚಿಕೊಂಡು, ಇಂಜಿನಿಯರ್‌ಗೆ ತೋರಿಸಿ, ಬಿಲ್ ತೆಗೆದುಕೊಳ್ಳುತ್ತಾನೆ. ಹೀಗಾಗಿ, ಸರ್ಕಾರದ ಹಣ ದುರುಪಯೋಗವಾಗುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ? ಆದುದರಿಂದ, ಒಂದು ಯೂನಿಟ್ ಕಾಸ್ಟ್‌ಗೆ ಕನಿಷ್ಠ ಎಷ್ಟಾಗುತ್ತದೆ? ಎಂಬುದನ್ನು ಸರ್ಕಾರ ಪರಿಗಣಿಸಿ ಅದರಂತೆ ಹಣವನ್ನು ಕೊಡಬೇಕೇ ವಿನಃ ಇಲ್ಲದಿದ್ದರೆ, ಫಲಾನುಭವಿಗಳಿಗೆ ಇದು ಸರಿಯಾದ ಅನುಕೂಲವಾಗುವುದಿಲ್ಲ. ಇಷ್ಟು ಲಕ್ಷ ಮನೆಗಳನ್ನು ಕಟ್ಟಿದ್ದೇವೆಂದು ಪತ್ರದಲ್ಲಿರುತ್ತದೆಯೇ ವಿನಃ ನಿಜವಾದ ಫಲಾನುಭವಿಗಳು ಮನೆಗಳನ್ನು ಕಟ್ಟಲು ಸಾಧ್ಯವಾಗುವುದಿಲ್ಲ. ಆದರ ಬಗ್ಗೆ ಸರ್ಕಾರ ಪರಿಗಣಿಸಿ ಎಂದು ನಾನು ಈ ಸಂದರ್ಭದಲ್ಲಿ ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಕೇಳುತ್ತೇನೆ.

SRI QUMURUL ISLAM :— In this regard, I will have strict vigilance.

ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ :— ನನ್ನ ಮೊದಲನೆ ಪ್ರಶ್ನೆಗೆ ಸಚಿವರು ಸರಿಯಾದ ಉತ್ತರ ಕೊಡಲಿಲ್ಲ. ಜಿಲ್ಲೆಯ ಮಹಾನಗರ ಸಭೆಯ ಮೂರು ಕ್ಷೇತ್ರಗಳಿಗೂ ಒಂದೂ ಸೈಟು, ಮನೆ ಕೊಡಲಿಲ್ಲ. ಎರಡನೆಯದು ಮಹತ್ವದ ಪ್ರಶ್ನೆಯಾಗಿದ್ದು, ಇದಕ್ಕೂ ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ಇದರಲ್ಲಿ ಅಧಿಕಾರಿಗಳು ಇನ್‌ವಾಲ್ವ್ ಆಗಿದ್ದಾರೆ. ಅವರ ಮೇಲೇನಾದರೂ ಕ್ರಮ ತೆಗೆದುಕೊಳ್ಳುತ್ತೀರಾ? ಅಧಿಕಾರವನ್ನು ದುರುಪಯೋಗ ಮಾಡಿಕೊಂಡು, ನಿವೇಶನ ಹಂಚಿರುವ ಅವರ ಸಮಕ್ಷಮದಲ್ಲೇ ಸಭೆ ನಡೆಸಿ ಹಂಚಿದ ಅಧಿಕಾರಿಗಳ ಮೇಲೇನು ಕ್ರಮ ತೆಗೆದುಕೊಳ್ಳುತ್ತೀರಿ? ನಿವೇಶನ ಹಕ್ಕು ಪತ್ರ ಇಟ್ಟುಕೊಂಡವರಿಗೆ ನಿವೇಶನವನ್ನು ಕೊಡುತ್ತೀರಾ? ಇದಕ್ಕೆ ಸರಿಯಾದ ಉತ್ತರ ನೀಡಬೇಕು.

ಶ್ರೀ ಖಮರುಲ್ ಇಸ್ಲಾಂ :— ಸರ್ಕಾರ ನಿಗದಿಪಡಿಸಿದ ಗುರಿ ಪ್ರಕಾರ, the officers have completed the target. ಆ ಗುರಿಯನ್ನು ಯಾವ ರೀತಿ ನಿಗದಿಪಡಿಸಬೇಕೆಂಬುದು ಸರ್ಕಾರದ ಕೆಲಸವಾಗಿದೆ. ಕಳೆದ ಮೂರು ವರ್ಷಗಳಲ್ಲಿ ಎಲ್ಲೆಲ್ಲಿ ಹೆಚ್ಚು ಬೇಡಿಕೆ ಇದೆ, ಆ ಪ್ರಕಾರ ಮಾಡಿದ್ದು, ನಮ್ಮ ಸರ್ಕಾರ ಬಂದ ಮೇಲೆ ಜನಸಂಖ್ಯೆಯ ಆಧಾರದ ಮೇಲೆ ಮಾಡುತ್ತಿದ್ದೇವೆ. So, there cannot be a discrimination. ಈ ವರ್ಷಕ್ಕೆ ಟಾರ್ಗೆಟ್ ರಿಲೀಸ್ ಮಾಡಿದ್ದೇವೆ. ಟಾರ್ಗೆಟ್ ಪ್ರಕಾರ ಹೆಚ್ಚು-ಕಡಿಮೆ ಇದ್ದರೆ, ಅದನ್ನು ತಾವು ನನ್ನ ಗಮನಕ್ಕೆ ತಂದರೆ, ಒಳ್ಳೆಯದು.

ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ :— ಪೊಟ್ಟಿ ಹಕ್ಕುಪತ್ರ ಕೊಡಲು ಶಾಮೀಲಾದ ಅಧಿಕಾರಿಗಳಿಗೆ ಈ ಕ್ರಮ ತೆಗೆದುಕೊಂಡ ಅಧಿಕಾರಿಗಳ ಮೇಲೇನು ಕ್ರಮ ತೆಗೆದುಕೊಳ್ಳುತ್ತೀರಿ? ಹಕ್ಕುಪತ್ರ ಹೊಂದಿರುವವರಿಗೆ ನಿವೇಶನ ಕೊಡುತ್ತೀರಾ?

SRI QUMURUL ISLAM :— If you bring to my notice any specific case, I will enquire.

ಶ್ರೀ ಎ.ಆರ್. ಕೃಷ್ಣಮೂರ್ತಿ :— ಮಾನ್ಯ ಸಚಿವರು ಸರ್ಕಾರದ ಮಾನದಂಡದ ಪ್ರಕಾರ ಗುರಿ ನಿಗದಿಪಡಿಸಿದ್ದೇವೆಂದು ಹೇಳಿದ್ದಾರೆ. ನಾನು ನನ್ನ ಕ್ಷೇತ್ರದ ಉದಾಹರಣೆ ಕೊಡುವುದಾದರೆ, ಆಶ್ರಯ ಸಮಿತಿಯಲ್ಲಿ ಸರ್ಕಾರ ಈ ವರ್ಷ ನನ್ನ ಕ್ಷೇತ್ರಕ್ಕೆ ಕೇವಲ 98 ಸೈಟುಗಳನ್ನು ಖರೀದಿಸಲು ಅವಕಾಶ ಕೊಟ್ಟಿದ್ದು, ಹಿಂದೆ ನಮ್ಮ ಸರ್ಕಾರದಲ್ಲಿ ಸಾವಿರಾರು ಸೈಟುಗಳನ್ನು ಖರೀದಿಸಿ ಹಂಚಿಕೆ ಮಾಡಿರುವ ಉದಾಹರಣೆ ಇದೆ. ಆದುದರಿಂದ, ಇದರ ಬಗ್ಗೆ ಕ್ಲಾರಿಫೈ ಮಾಡಬೇಕು.

ಶ್ರೀ ಖಮರುಲ್ ಇಸ್ಲಾಂ :— ಸದಸ್ಯರು ಇದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ, ನಾನು ಉತ್ತರಿಸುತ್ತೇನೆ.

ಬೀದರ್ ಜಿಲ್ಲೆಯಲ್ಲಿ ಅತಿ ವೃಷ್ಟಿಯಿಂದ ಹಾನಿಯಾಗಿರುವುದು.

492(4600) ಶ್ರೀ ದಿನೇಶ್ ಗುಂಡುರಾವ್ (ಗಾಂಧಿನಗರ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಬೀದರ್ ಜಿಲ್ಲೆಯಲ್ಲಿ ಇತ್ತೀಚೆಗೆ ಬಂದ ಅತಿವೃಷ್ಟಿಯಿಂದಾದ ಹಾನಿಯ ಮೊತ್ತವೆಷ್ಟು;

2. ಇಲ್ಲಿನ ನಿರಾಶ್ರಿತರಿಗೆ ಹಾಗೂ ತೊಂದರೆಗೊಳಗಾದ ಜನರಿಗೆ ಪರಿಹಾರಕ್ಕಾಗಿ ಇದುವರೆಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಹಣವೆಷ್ಟು?

3. ಈ ಹಣದಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳಾವುವು (ವಿವರ ನೀಡುವುದು)

4. ಬಾಕಿ ಉಳಿದಿರುವ ಪರಿಹಾರ ಹಣವನ್ನು ಸರ್ಕಾರವು ಎಂದು ಬಿಡುಗಡೆ ಮಾಡುವುದು?